ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು ಸನ್ನ ಗದುಸಕ್ಕೆ ಅದು ಬಂದಿಲ್ಲ.

ಶ್ರೀ ಪುಟ್ಟೇಗೌಡ.—ಈ ಬಗ್ಗೆ ಇನ್ನು ಮುಂದೆ ರೈತರಿಗೆ ಕೂಡಲೆಯಾಗದ ಹಾಗೆ ಸರ್ಕಾರದವರು ತಳುವಳಿಕೆ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಡೋಣ.

RELEASE OF LAND FROM HEREBARE KAVAL OF DANDIGANAHALLI IN CHANNARAYAPATNA TALUK.

*Q.—1045. Sri N. G. NARASIMHE GOWDA (Sravanabelagola).—

Will the Government be pleased to state :—

(*a*) whether it is a fact that the poor ryots residing around the Herebare Kaval of Dandiganahalli in Channarayapatna taluk are requesting for the release of the said kaval land for cultivation,

(*b*) whether they would provide lands for the landless people of the kaval releasing the entire land for cultivation ?

A.—Sri KADIDAL MANJAPPA (Minister for Revenue).—

(*a*) Yes.

(*b*) These cases will be considered after the kaval lands are released for cultivation.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ದಂಡಿಗನಹಳ್ಳಿಯ ಸುತ್ತಮುತ್ತಲೂ ಸುಮಾರು 500 ಸಂಸಾರಗಳಿಗೆ ಮೇಲ್ಪಟ್ಟು ಜಮೀನು ಇಲ್ಲದೇ ಇರುವವರು ಇರುವುದರಿಂದ ಆ ಹಳ್ಳಿಯ ಹೆರಬರ ಕಾವಲ್‌ನಿಂದ ಜಮೀನನ್ನು ನರೆಂದರ್ ಮಾಡಿ ಈಗಿರತಕ್ಕ ದರಖಾಸ್ತುದಾರರಿಗೆ ಕೊಡುವುದಕ್ಕಾಗುತ್ತದೆಯೇ ?

†ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಕೊಡುವುದಕ್ಕೆ ಜಮೀನು ಇನ್ನೂ ರಿಲೀಜ್ ಆಗಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಜಾಗ್ರತೆಯಾಗಿ ಆ ಜಮೀನು ರಿಲೀಜ್ ಆಗುವುದಕ್ಕಾಗಿ ಸಂಬಂಧಪಟ್ಟವರಿಗೆ ಶಿಫಾರ್ಸು ಮಾಡಿಯಾದರೂ ಕಳುಹಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಆ ಬಗ್ಗೆ ಈಗಲೇ ನಿರ್ಧಾರವಾಗಿ ಏನು ಮಾಡುತ್ತೇವೆಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಏನು ಸ್ವಾಮಿ, ನಿಮಗೆ ಕಷ್ಟ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಜಮೀನನ್ನು ರಿಲೀಜ್ ಮಾಡಬೇಕೇ, ಬೇಡವೇ ಎಂಬುದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರಿಗೆ ಈಗ ರೆಫೆರ್ ಮಾಡಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ರೀತಿಯಾಗಿ ಜಮೀನನ್ನು ರಿಲೀಸ್ ಮಾಡಿಕೊಡಬೇಕು ಎಂದು ಎಷ್ಟು ವರ್ಷಗಳಿಂದ ಸರಕಾರದ ಮುಂದೆ ಇದೆ ? ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು ? ಮೂರು ತಿಂಗಳಿನಲ್ಲೇ ಅನಿವಾರ್ಯ ಹಸ್ತಾಂತರ ಇಲಾಖೆಯನ್ನು ಕೇಳಿ ಇದರ ಬಗ್ಗೆ ನಿರ್ಧಾರ ಮಾಡಲು ಇದ್ದ ಕಷ್ಟವಾದರೂ ಏನು ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಅರಣ್ಯ ಪ್ರದೇಶಗಳಿದ್ದುವೋ ಅಲ್ಲೆಲ್ಲಾ ಲಾಗಾಯತಿನಿಂದಲೂ ರಿಲೀಸು ಮಾಡಲಾಗುತ್ತಿದೆ. ಅವ್ಯವಹಾರ ಕಾವಲುಗಳು ಎಲ್ಲೆಲ್ಲಿವೆಯೋ ಅವನ್ನೆಲ್ಲಾ ನೋಡಿಕೊಂಡು ನಿರ್ಧಾರ ಮಾಡಬೇಕಾಗಿದೆ.

ಶ್ರೀ ಜೆ. ಬಿ. ಮುಲ್ಲಾರಾಧ್ಯ.—ಈ ರೀತಿ ರಿಲೀಸು ಮಾಡಬೇಕೆಂದು ಸರಕಾರದ ಮುಂದೆ ಯಾವಾಗಿನಿಂದ ಬರುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ವರ್ಷಗಳಿಂದ ಬರುತ್ತಲಿದೆ. ಅದರ ಪೈಕಿ ಈಗಾಗಲೇ 97 ಎಕರೆಗಳಷ್ಟು ರಿಲೀಸು ಮಾಡರಾಗಿದೆ.

ಶ್ರೀ ಜೆ. ಬಿ. ಮುಲ್ಲಾರಾಧ್ಯ.—ಎಲ್ಲವನ್ನೂ ರಿಲೀಸು ಮಾಡುವುದಕ್ಕೆ ಇದ್ದ ತೊಂದರೆಗಳೇನು? ಮತ್ತು ಆ ರೀತಿಯಾದ ನಿರ್ಧಾರವನ್ನೇಕೆ ತೆಗೆದುಕೊಳ್ಳಲಿಲ್ಲ ? ಯಾರಿಂದಲೋ ಒತ್ತಾಯ ಬಂತು ಎಂದು 97 ಎಕರೆ ರಿಲೀಸು ಮಾಡಿದ್ದೀರಿ ಮತ್ತೇ ಇನ್ನುಮುಂದಾದರೂ ಒತ್ತಾಯ ಬಂದರೆ ಆಗ ನೂರು ಎಕರೆ ರಿಲೀಸು ಮಾಡುವುದು. ಹೀಗೇಕೆ ಮಾಡುತ್ತೀರಿ ? ಹೀಗಾದರೆ ಬಡ ರೈತರಿಗೆ ಜಮೀನೇ ಸಿಗುವುದಿಲ್ಲ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗಾಗಿಯೇ ಕೊಡುತ್ತಿರುವುದು. ಇವನ್ನು ಅದಷ್ಟು ಜಾಗ್ರತೆಯಾಗಿ ನಿರ್ಧಾರ ಮಾಡಬೇಕೆಂದಿದ್ದೇವೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಹಿರೇಬನೇ ಕಾವಲಿನಲ್ಲಿ ಭೂಮಿ ನಾರಾಯಕ್ಕಾಗಿದ್ದರೂ ಅದನ್ನು ರಿಲೀಸು ಮಾಡಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾರಾಯಕ್ಕಾಗಿದೆ ಎಂದು ಅದನ್ನು ರಿಸರ್ವ್ ಮಾಡುತ್ತಿಲ್ಲ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಇಂತಹ ಕಡೆಗಳಲ್ಲಿ ಜಾಗ್ರತೆ ರಿಲೀಸು ಮಾಡುವ ಕಾರ್ಯಕ್ರಮವನ್ನು ತೆಗದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಾವಿಂಗಲೇ ರಿಲೀಸು ಮಾಡುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಇವರ ಅವಶ್ಯಕತೆಗಳಿಗನುಸಾರವಾಗಿ ಪರಿಶೀಲನೆ ಮಾಡಿ ಆ ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಆದಕಾರಣ ಈಗಲೇ ನಾನೇನೂ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಜೆ. ಬಿ. ಮುಲ್ಲಾರಾಧ್ಯ.—ಸರಕಾರವು ನೀತಿಯನ್ನನುಸರಿಸಿ ಅಮೃತಮಹಲ್ ಕಾವಲನ್ನು ತೆಗೆಯಬೇಕೆಂದು ಮಾಡಿರುವಾಗ ಅದರಂತೆ ನಿರ್ಧಾರವನ್ನು ತೆಗೆದುಕೊಳ್ಳಲು ಏನು ಕಷ್ಟವಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಸರಕಾರ ಇನ್ನೂ ನಿರ್ಧಾರ ಮಾಡಿಲ್ಲ.

ಶ್ರೀ ಜೆ. ಬಿ. ಮುಲ್ಲಾರಾಧ್ಯ.—ತತ್ವತಃ ಒಪ್ಪಿರುವಾಗ ಸರಕಾರ ಏಕೆ ನಿರ್ಧಾರ ಮಾಡಲಲ್ಲ. Why not Government come to a decision and declare the policy that all these lands will be either surrendered or reserved.

ಶ್ರೀ ಎಸ್. ರಾಚಯ್ಯ.—ಈ ವಿಚಾರವು ಪ್ರಶ್ನೆ ಸರಕಾರವು ಮುಂದೆ ಈಗಾಗಲೇ ಬಂದು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಇವೆ. ಇವೆಲ್ಲವನ್ನೂ ವಿಚಾರ ಮಾಡಿ ಪರಿಶೀಲನೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಂಡು ಮಾಡಬೇಕಾಗಿದೆ. ಅದಷ್ಟು ಜಾಗ್ರತೆ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಬೇಕೆಂದು ಸರಕಾರದ ಉದ್ದೇಶವಾಗಿದೆ.